# ಸುದ್ದಿಸಂಚಯ

## ವಿಶೇಷ ನೆರವಿನ ಉಚಿತ ಶಿಕ್ಷಣ ಕಾರ್ಯಕ್ರಮ

ಮೈಸೂರು ಶ್ರೀರಾಮಕೃಷ್ಣ ಆಶ್ರಮವು ತನ್ನ ಅಮೃತ ಮಹೋತ್ಸವದ ಅಂಗವಾಗಿ ಆರ್ಥಿಕವಾಗಿ ಹಿಂದುಳಿದ, ಸಾಧಾರಣ ಬುದ್ಧಿಶಕ್ತಿಯ (*Average intelligence*) ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗಾಗಿ 'ವಿಶೇಷ ನೆರವಿನ ಉಚಿತ ಶಿಕ್ಷಣ ಕಾರ್ಯಕ್ರಮ' ವನ್ನು ಹಮ್ಮಿಕೊಂಡಿದೆ. ಅಂತಹ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಅಧ್ಯಯನದಲ್ಲಿ ಹಾಗೂ ಜೀವನದಲ್ಲಿ ಉನ್ನತಿಯನ್ನು ಸಾಧಿಸಲು ಸಹಾಯವಾಗುವಂತೆ ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ.

ಡಿಸೆಂಬರ್ ೧೭ರ ಭಾನುವಾರ, ಶ್ರೀಮಾತೆ ಶಾರದಾದೇವಿಯವರ ಜನ್ಮದಿನದಂದು ಆಶ್ರಮದ ಸಭಾಂಗಣದಲ್ಲಿ, ಈಸ್ಟ್ ಅಂಡ್ ವೆಸ್ಟ್ ಸೆಕ್ಯೂರಿಟೀಸ್ ಪ್ರೈ.ಲಿಮಿಟೆಡ್, ಮುಂಬಯಿ, ಇದರ ಛೇರ್‌ಮನ್‌ರಾದ ಶ್ರೀ ಮಹೇಂದ್ರ ಪಾಲ್ ಬಹಲ್ ಅವರು ಈ ಕಾರ್ಯಕ್ರಮವನ್ನು ವಿಧಿಪೂರ್ವಕವಾಗಿ ಉದ್ಘಾಟಿಸಿದರು. ಖ್ಯಾತ ಸಾಹಿತಿಗಳೂ ಹಾಗೂ ಮೈಸೂರಿನ ಪ್ರಸಾರಾಂಗದ ವಿಶ್ರಾಂತ ನಿರ್ದೇಶಕರಾದ ಡಾ. ಪ್ರಭುಶಂಕರ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.

ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದಜೀಯವರು ಈ ವಿಶೇಷ ನೆರವಿನ ಉಚಿತ ಶಿಕ್ಷಣದ ಕಾರ್ಯಕ್ರಮವನ್ನು ಪರಿಚಯ ಮಾಡಿಕೊಡುತ್ತಾ, ಈ ಯೋಜನೆಯ ಹಿಂದಿರುವ ಧ್ಯೇಯೋದ್ದೇಶಗಳನ್ನೂ ಹಾಗೂ ಅದರ ವ್ಯಾಪ್ತಿಯನ್ನೂ ವಿವರಿಸಿದರು. ಈ ಯೋಜನೆಯ ಪ್ರಮುಖ ಅಂಶಗಳೆಂದರೆ : (ಅ) ಹೆಚ್ಚಿನ ಮಟ್ಟಿಗೆ ಸರ್ಕಾರಿ ಶಾಲೆಗಳಲ್ಲಿ ಓದುತ್ತಿದ್ದು ತಮ್ಮ ವ್ಯಾಸಂಗದ ವಿಷಯಗಳಲ್ಲಿ ಯಾವುದೇ ರೀತಿಯ ಕೋಚಿಂಗ್ ಪಡೆಯಲು ಸಾಧ್ಯವಾಗದ ಆರ್ಥಿಕ ಪರಿಸ್ಥಿತಿಯಲ್ಲಿರುವ ಮಕ್ಕಳಿಗೆ ಮಾತ್ರ ಈ ಕಾರ್ಯಕ್ರಮದಲ್ಲಿ ಪ್ರವೇಶವಿರುತ್ತದೆ ಹಾಗೂ ಇಲ್ಲಿನ ಶಿಕ್ಷಣ ಸಂಪೂರ್ಣ ಉಚಿತವಾಗಿರುತ್ತದೆ (ಆ) ತಮ್ಮ ಅಧ್ಯಯನದ ವಿಷಯಗಳಲ್ಲಿ ಶೇಕಡಾ ೩೫ ರಿಂದ ೬೫ರ ಅಂತರದಲ್ಲಿ ಅಂಕಗಳನ್ನು ಪಡೆದ ಮಕ್ಕಳು ಇದಕ್ಕೆ ಅರ್ಹರಾಗಿರುತ್ತಾರೆ. (ಇ) ಪರಸ್ಪರ ಕ್ರಿಯಾತ್ಮಕ ವಿಧಾನದಲ್ಲಿ ಬೋಧನೆ (ಈ) ನೆನಪಿನ ಶಕ್ತಿಯನ್ನು ಹೆಚ್ಚಿಸುವ ತರಬೇತಿ (ಉ) ವ್ಯಾಸಂಗದ ಉತ್ತಮ ವಿಧಾನಗಳಲ್ಲಿ ಶಿಕ್ಷಣ (ಊ) ಏಕಾಗ್ರತೆಯನ್ನು ಹಾಗೂ ಗಮನದ ಮಿತಿಯನ್ನು ಉತ್ತಮಪಡಿಸುವ ತರಬೇತಿ. (ಋ) ವಿದ್ಯಾರ್ಥಿಗಳ ಸರ್ವಾಂಗೀಣ ವಿಕಸನಕ್ಕಾಗಿ ವಿಶೇಷವಾದ 'ವ್ಯಕ್ತಿತ್ವ ನಿರ್ಮಾಣದ' ತರಗತಿಗಳು.

'ಡಿಸೆಂಬರ್ 1ನೆ ತಾರೀಖಿನಿಂದ ಒಂಬತ್ತನೆ ತರಗತಿಯ ವಿದ್ಯಾರ್ಥಿಗಳಿಗೆ ಪಾಠಗಳು ಪ್ರಾರಂಭವಾಗಿದ್ದು ಮುಂದಿನ ಶೈಕ್ಷಣಿಕ ವರ್ಷದ ಪ್ರಾರಂಭದಿಂದಲೇ 9 ಮತ್ತು 10ನೇ ತರಗತಿಗಳ ವಿದ್ಯಾರ್ಥಿಗಳಿಗೆ ಪಾಠಗಳು ಪ್ರಾರಂಭವಾಗಲಿದೆ. ಪ್ರತಿಯೊಂದು ತರಗತಿಯಲ್ಲಿಯೂ 40 ವಿದ್ಯಾರ್ಥಿಗಳಿರುವ ಎರಡು ವಿಭಾಗಗಳಿರುತ್ತವೆ. ವಾರದ 5 ದಿನಗಳು ಸಂಜೆ 5.30 ರಿಂದ 7.00 ರವರೆಗೆ ಎರಡು ಅವಧಿಗಳ ತರಗತಿಗಳಿವೆ. ಬೋಧಿಸಲ್ಪಡುವ ವಿಷಯಗಳು ಇಂಗ್ಲಿಷ್, ವಿಜ್ಞಾನ ಮತ್ತು ಗಣಿತ. ಇದಕ್ಕಾಗಿ ನುರಿತ ಶಿಕ್ಷಕರನ್ನು ನೇಮಕ ಮಾಡಲಾಗಿದೆ.

ಇದಲ್ಲದೆ ವಾರದಲ್ಲಿ ಒಂದು ದಿನ ವ್ಯಕ್ತಿತ್ವ ವಿಕಸನದದ ಬಗೆಗೆ ವಿಶೇಷ ಕಾರ್ಯಕ್ರಮವನ್ನು ಶ್ರೀರಾಮಕೃಷ್ಣ ಆಶ್ರಮದಲ್ಲಿ ನಡೆಸಲಾಗುತ್ತಿದೆ. ಈ ಕಾರ್ಯಕ್ರಮವನ್ನು ಆಶ್ರಮದ ಸಂನ್ಯಾಸಿಗಳು ಹಾಗೂ ಇತರ ಸಂಪನ್ಮೂಲ ವ್ಯಕ್ತಿಗಳು ನಡೆಸಿಕೊಡುತ್ತಿದ್ದಾರೆ. ಈ ಕಾರ್ಯಕ್ರಮದ ಯಶಸ್ಸು ಬಹು ಮಟ್ಟಿಗೆ ವಿದ್ಯಾರ್ಥಿಗಳ ತಂದೆ-ತಾಯಿ / ಪೋಷಕರು ಹಾಗೂ ಶಾಲೆಯ ಅಧ್ಯಾಪಕರು, ಮುಖ್ಯಸ್ಥರು ಸ್ವ-ಇಚ್ಛೆಯಿಂದ ಸಕ್ರಿಯವಾಗಿ ಸಹಕರಿಸುವುದರ ಮೇಲೆ ಅವಲಂಬಿಸಿದೆ' ಎಂದು ಅವರು ತಿಳಿಸಿದರು.

ನಿಗದಿತ ಶಾಲೆಯ ಮುಖ್ಯ ಅಧ್ಯಾಪಕ/ಕಿಯರು ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟು ಆಯ್ಕೆಮಾಡಿದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗಾಗಿ ಒಂದು ಕಿರು ಸಂದರ್ಶನದ ಮೂಲಕ ಈ ಶಿಕ್ಷಣಕ್ಕೆ ಸೇರಿಸಿಕೊಳ್ಳಲಾಯಿತು.

ಮೈಸೂರಿನಿಂದ ಸ್ವಲ್ಪ ಹೊರವಲಯದಲ್ಲಿನ ಹಿಂದುಳಿದ ಪ್ರದೇಶವಾದ ಕುಂಬಾರ ಕೊಪ್ಪಲಿನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತರಗತಿಗಳು ನಡೆಯುತ್ತಿವೆ. ಮುಂದೆ ಇತರ ಪ್ರದೇಶಗಳಲ್ಲಿನ ಹಿಂದುಳಿದ ವಿದ್ಯಾರ್ಥಿಗಳಿಗಾಗಿಯೂ ಕೇಂದ್ರಗಳನ್ನು ತೆರೆಯುವ ಯೋಜನೆಯಿದೆ.' ಎಂದು ಅವರು ತಿಳಿಸಿದರು. ಕಾರ್ಯಕ್ರಮದ ಮೇಲ್ವಿಚಾರಣೆಯನ್ನು ಆಶ್ರಮದ ಸಂನ್ಯಾಸಿಗಳು ಸಂಯೋಜಕರ ಸಹಾಯದಿಂದ ನೋಡಿಕೊಳ್ಳುತ್ತಿದ್ದಾರೆ.

ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ರಾಮಕೃಷ್ಣ ವಿದ್ಯಾಶಾಲೆಯು ಅನೇಕ ವಿಧದ ಆಧುನಿಕ ಸೌಲಭ್ಯಗಳಿಂದ ಕೂಡಿದ ಆವಾಸೀ ವಿದ್ಯಾರ್ಥಿಗಳಿಗೆ ಹೆಚ್ಚಿನ ಗುಣಮಟ್ಟದ ಶಿಕ್ಷಣ ನೀಡುತ್ತಿರುವುದಕ್ಕೆ ಹೆಸರುವಾಸಿಯಾಗಿದೆ. ಆದರೆ ಈ ಹೊಸ ಯೋಜನೆಯ ವಿಶೇಷ ನೆರವಿನ ಉಚಿತ ಶಿಕ್ಷಣ ಕಾರ್ಯಕ್ರಮದಿಂದ ಆಶ್ರಮವು ತನ್ನ ಸೇವಾವ್ಯಾಪ್ತಿಯನ್ನು ವಿಸ್ತರಿಸುವುದರ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಮೈಲುಗಲ್ಲನ್ನು ಸ್ಥಾಪಿಸಿದೆ ಎಂದು ಕಾರ್ಯಕ್ರಮವನ್ನು ಉದ್ಘಾಟಿಸಿದ ಮುಖ್ಯ ಅತಿಥಿಗಳಾದ ಶ್ರೀ ಮಹೇಂದ್ರ ಪಾಲ್ ಬಹಲ್ ಅವರು ಅಭಿಪ್ರಾಯಪಟ್ಟರು.